# ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನಂ. 39, ಯುನೈಟೆಡ್ ಮ್ಯಾನ್‌ಷನ್, ಮಹಾತ್ಮಗಾಂಧಿ ರಸ್ತೆ
ಬೆಂಗಳೂರು-560001. ಫೋನ್ : 080 - 71204445 / 71204446
ಫ್ಯಾಕ್ಸ್ : 91-080-25580402
ಪಿ.ಬಿ. ನಂ.: 5307, Website : http://www.cauverycrafts.com


ನಂ. ಕೆ.ಎಸ್.ಹೆಚ್.ಡಿ.ಸಿ./ಬೆಂ/ಗುರುಕುಲ/ಪ್ರಕಟಣೆ/300/2018-19 ದಿನಾಂಕ : 22-05-2018

## -: ಪ್ರಕಟಣೆ :-

ಶಿವಮೊಗ್ಗ ಜಿಲ್ಲೆಯ ಸಾಗರದ ಶ್ರೀಗಂಧ ಕಲಾ ಸಂಕೀರ್ಣದಲ್ಲಿರುವ "ಶಿಲ್ಪ ಗುರುಕುಲ" ಸಂಸ್ಥೆಯಲ್ಲಿ ಮರ ಕೆತ್ತನೆ / ಕಲ್ಲಿನ ಕೆತ್ತನೆ ಕಲೆಯಲ್ಲಿ 2018-20ನೇ ಸಾಲಿನ 2 ವರ್ಷಗಳ ಅವಧಿಯ ಉಚಿತ ಸರ್ಟಿಫಿಕೇಷನ್ ಕೋರ್ಸ್‌ಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| | |
|---|---|
| **ತರಬೇತಿ ವಿವರ** | " ಶಿಲ್ಪಕಲೆ " - ಮಾಧ್ಯಮ : ಮರ ಮತ್ತು ಕಲ್ಲು |
| **ತರಬೇತಿಯ ಅವಧಿ** | 24 ತಿಂಗಳು |
| **ಸೌಲಭ್ಯಗಳು** | ಊಟ, ವಸತಿ, ತರಬೇತಿ, ಸಮವಸ್ತ್ರ, ಶೈಕ್ಷಣಿಕ ಪ್ರವಾಸ, ಕೆತ್ತನೆಯ ಉಪಕರಣಗಳು ಇತ್ಯಾದಿಗಳನ್ನು ಉಚಿತವಾಗಿ ಒದಗಿಸಲಾಗುವುದು ಹಾಗೂ ಮಾಸಿಕ ರೂ. 750/- ಶಿಷ್ಯವೇತನ ನೀಡಲಾಗುವುದು. |
| **ವಯೋಮಿತಿ** | 16 ರಿಂದ 35 ವರ್ಷ<br>(ಅರ್ಜಿ ಸಲ್ಲಿಸುವ ಕೊನೆಯ ದಿನಾಂಕಕ್ಕೆ) |
| **ವಿದ್ಯಾರ್ಹತೆ** | ಕನಿಷ್ಠ ಏಳನೇ ತರಗತಿಯಲ್ಲಿ ಉತ್ತೀರ್ಣರಾಗಿದ್ದು, ಕರಕುಶಲ ಕೆತ್ತನೆ ಚಟುವಟಿಕೆಗಳಲ್ಲಿ ಅಭಿರುಚಿ ಮತ್ತು ಆಸಕ್ತಿ ಹೊಂದಿರಬೇಕು. |

ಮೇಲ್ಕಂಡ 2 ವರ್ಷಗಳ ಅವಧಿಯ ಕೋರ್ಸ್‌ಗೆ ಸೇರಬಯಸುವ ಅಭ್ಯರ್ಥಿಗಳು ಅರ್ಜಿ ನಮೂನೆಯನ್ನು ಉಚಿತವಾಗಿ ಯೋಜನಾಧಿಕಾರಿಗಳು, ಶ್ರೀಗಂಧದ ಕಲಾ ಸಂಕೀರ್ಣ, ಸಾಗರ/ಶಿರಸಿ/ಕುಮಟ/ಸೊರಬ / ಬಿದರಿ ಕಲಾ ಸಂಕೀರ್ಣ, ಬೀದರ್ / ಯೋಜನಾಧಿಕಾರಿ, ಎಂ.ಸಿ.ಸಿ. ನಂ. 39, ಎಂ.ಜಿ. ರಸ್ತೆ, ಬೆಂಗಳೂರು ಮತ್ತು ಎಂ.ಸಿ.ಸಿ. ಮೈಸೂರು ಇವರಿಂದ ಹಾಗೂ ನಿಗಮದ ಕೇಂದ್ರ ಕಛೇರಿಯ ವೆಬ್‌ಸೈಟ್ http://www.cauverycrafts.com/gurukula ಮೂಲಕ ಮತ್ತು ಆಯಾ ಜಿಲ್ಲೆಯ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರದ ಕಛೇರಿಗಳಲ್ಲಿಯೂ ಸಹ ಪಡೆಯಬಹುದಾಗಿದೆ. ಭರ್ತಿ ಮಾಡಿದ ಅರ್ಜಿಗಳನ್ನು ಸಂಬಂಧಪಟ್ಟ ದಾಖಲಾತಿ ಪ್ರತಿಗಳೊಂದಿಗೆ ದಿನಾಂಕ: 06-06-2018 ರೊಳಗೆ ಯೋಜನಾಧಿಕಾರಿಗಳು, ಶ್ರೀಗಂಧದ ಕಲಾ ಸಂಕೀರ್ಣ, ಕೆಳದಿ ರಸ್ತೆ, ಸಾಗರ-577401, ಶಿವಮೊಗ್ಗ ಜಿಲ್ಲೆ ಇವರಿಗೆ ಕಛೇರಿಯ ವೇಳೆಯಲ್ಲಿ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಬಹುದಾಗಿದೆ. ದಿನಾಂಕ: 06-06-2018 ರ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಯೋಜನಾಧಿಕಾರಿ, ಶ್ರೀಗಂಧದ ಕಲಾ ಸಂಕೀರ್ಣ, ಸಾಗರ ಇವರನ್ನು ಮೊಬೈಲ್ ಸಂಖ್ಯೆ. 9448529600 ಹಾಗೂ ವಿಶೇಷಾಧಿಕಾರಿ ಶಿಲ್ಪಗುರುಕುಲ ಮೊಬೈಲ್ ಸಂಖ್ಯೆ. 9844031650 ಮುಖಾಂತರ ಸಂಪರ್ಕಿಸಬಹುದಾಗಿದೆ.

ಸಹಿ/-
ಪ್ರಧಾನ ವ್ಯವಸ್ಥಾಪಕರು (ಅಭಿವೃದ್ಧಿ)

**ಮುಚ್ಚಳಿಕೆ**

**[ರೂ. 100/- ಛಾಪಕಾಗದದ ಮೇಲೆ]**

ನಾನು.................................................................................ಬಿನ್/ಕೋಂ..................................................... ರಲ್ಲಿ.............................................................. ವಾಸವಾಗಿದ್ದು .................................................................... ದಿನಾಂಕದಿಂದ .................................................... ರವರೆಗೆ ನಡೆಯುವ ತರಬೇತಿಗೆ ಹಾಜರಾಗಿ ತರಬೇತಿಯನ್ನು ಪೂರ್ಣಗೊಳಿಸಿ ತರಬೇತಿಯಲ್ಲಿ ಪಡೆದ ಚಟುವಟಿಕೆಯನ್ನು ನಾನು ಸ್ವಯಂ ಉದ್ಯೋಗ ಹೊಂದಲು ಉಪಯೋಗಿಸಿಕೊಳ್ಳುತ್ತೇನೆ. ತರಬೇತಿಯ ಅವಧಿಯಲ್ಲಿ ಯಾವುದೇ ರೀತಿಯ ಆದ ಅನಾಹುತಗಳಿಗೆ ಮತ್ತು ಸಂಸ್ಥೆಯ ಆಸ್ತಿಗಳಿಗೆ ಹಾನಿಯಾದಲ್ಲಿ ನಾನೇ ಸಂಪೂರ್ಣ ಹೊಣೆಗಾರಿಕೆಯಾಗಿರುತ್ತೇನೆಂದು ಹಾಗೂ ಇದಕ್ಕೆ ಸಂಸ್ಥೆಯ ಯಾವುದೇ ರೀತಿಯ ಜವಾಬ್ದಾರರಾಗಿಲ್ಲವೆಂದು ಈ ಮೂಲಕ ಘೋಷಿಸಿರುತ್ತೇನೆ.

ಅಲ್ಲದೆ ತರಬೇತಿಯನ್ನು ಅಪೂರ್ಣಗೊಳಿಸಿದಲ್ಲಿ ತರಬೇತಿಗಾಗಿ ಮಾಡಿದ ವೆಚ್ಚವನ್ನು ಸಂಪೂರ್ಣವಾಗಿ ಮರುಪಾವತಿಸುತ್ತೇನೆ ಹಾಗೂ ನಿಗಮವು ಅಳವಡಿಸುವ ಷರತ್ತು ನಿಬಂಧನೆಗಳಿಗೆ ಬದ್ಧನಾಗಿರುತ್ತೇನೆ.

ಸ್ಥಳ:

ದಿನಾಂಕ:

ಪಾಲಕರ : ಪೋಷಕರ ಸಹಿ                                        ಅಭ್ಯರ್ಥಿಯ ಸಹಿ.